**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು**

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/ 2146 /2017–18 ದಿನಾಂಕ: 27–12–2017

**" ಇ–ಟೆಂಡರ್ ಪ್ರಕಟಣೆ ಸಂಖ್ಯೆ /13/2017 "**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ವಾಹನ ನಿಲ್ದಾಣದ ಮುಖ್ಯ ಕಟ್ಟಡದಲ್ಲಿ ಖಾಲಿಯಿರುವ ಮಳಿಗೆ ಸಂಖ್ಯೆ: 02ಕ್ಕೆ ಹಾಗೂ ಖಾಲಿಯಾಗುವ ಮಳಿಗೆ ಸಂಖ್ಯೆ–04ಕ್ಕೆ ಮತ್ತು ವಾಣಿಜ್ಯ ಸಂಕೀರ್ಣದಲ್ಲಿ ಖಾಲಿಯಿರುವ ಮಳಿಗೆ ಸಂಖ್ಯೆ–5ಕ್ಕೆ **ಐದು ವರ್ಷಗಳ** ಅವಧಿಗೆ ಪರವಾನಿಗೆದಾರರನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಆಯ್ಕೆ ಮಾಡಲು ದಿನಾಂಕ: 30–01–2018 ರಂದು ಟೆಂಡರ್ ನಿಗದಿಪಡಿಸಲಾಗಿದೆ. ಇ–ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಅರ್ಜಿ ಶುಲ್ಕವನ್ನು ಮತ್ತು ಇ.ಎಂ.ಡಿ ಮೊತ್ತವನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ ನಿಗಮ, ಬೆಂಗಳೂರು ಕೇಂದ್ರಿಯ ವಿಭಾಗ, ಬೆಂಗಳೂರು ರವರ ಹೆಸರಿನಲ್ಲಿ ಡಿಡಿಯನ್ನು ಪಡೆದು, ಮೂಲ ಡಿಡಿಗಳನ್ನು ಟೆಂಡರ್ ತೆರೆಯುವ ಸಮಯದಲ್ಲಿ ಹಾಜರುಪಡಿಸುವುದು. ಇ–ಟೆಂಡರ್ ಅರ್ಜಿಗಳನ್ನು / ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://www.eproc.Karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ ಮೊತ್ತದ ಡಿಡಿ ಪ್ರತಿಗಳನ್ನು ಹಾಗೂ ವಿಳಾಸದ ಮಾಹಿತಿ ಬಗ್ಗೆ ಆಧಾರ್‌ಕಾರ್ಡ್/ಚುನಾವಣಾ ಗುರುತಿನ ಚೀಟಿ/ಡ್ರೈವಿಂಗ್ ಲೈಸನ್ಸ್ ಹಾಗೂ ಸಂಬಂಧಪಟ್ಟ ದಾಖಲಾತಿಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ: 29–01–2018 ರಂದು 12:00 ಗಂಟೆಯವರೆಗೆ ಅಪ್‌ಲೋಡ್ ಮಾಡಬಹುದು. ದಿನಾಂಕ: 30–01–2018 ರಂದು ಇ–ಟೆಂಡರ್‌ನ್ನು ತೆರೆಯುವಾಗ ಭಾಗವಹಿಸಿರುವವರು ಮೂಲ ಡಿಡಿಗಳು ಮತ್ತು ದಾಖಲಾತಿಗಳೊಂದಿಗೆ ತಪ್ಪದೇ ಈ ವಿಭಾಗದ ಸಂಚಾರ ಶಾಖೆಯಲ್ಲಿ ಹಾಜರಿರಬೇಕು. **ಇ–ಟೆಂಡರ್‌ಗೆ ಒಳಪಡುವ ಮಳಿಗೆಗಳ ವಿವರಗಳು ಈ ಕೆಳಕಂಡಂತಿವೆ.**

| ಕ್ರ.ಸಂ. | ಸ್ಥಳದ ಹೆಸರು | ಮಳಿಗೆಗಳ ವಿವರ | ವಿಸ್ತೀರ್ಣ (ಚ.ಅ.ಗಳಲ್ಲಿ) | ಮಾಸಿಕ ಮಿತವ್ಯಯ ಶುಲ್ಕ | ಇ.ಎಂ.ಡಿ (ರೂ.ಗಳಲ್ಲಿ) | ಅರ್ಜಿ ಶುಲ್ಕ ರೂಗಳಲ್ಲಿ) |
|---|---|---|---|---|---|---|
| 1 | ನೆಲಮಂಗಲ ಬಸ್ ನಿಲ್ದಾಣ, | ಮಳಿಗೆ ಸಂಖ್ಯೆ–04 ಮುಖ್ಯಕಟ್ಟಡ | 150 | 26,353–00 | 79,059–00 | 265–00+GST |
| 2 | ನೆಲಮಂಗಲ ಬಸ್ ನಿಲ್ದಾಣ, | ಮಳಿಗೆ ಸಂಖ್ಯೆ–02 ಮುಖ್ಯಕಟ್ಟಡ | 112 | 17,220–00 | 51,660–00 | 173–00+GST |
| 3 | ನೆಲಮಂಗಲ ಬಸ್ ನಿಲ್ದಾಣ, | ಮಳಿಗೆ ಸಂಖ್ಯೆ–05 ವಾಣಿಜ್ಯ ಸಂಕೀರ್ಣ | 118 | 28,711–00 | 86,133–00 | 288–00+GST |

ಮೇಲಿನ ಮಳಿಗೆಗಳಿಗೆ ಇ–ಟೆಂಡರ್‌ನಲ್ಲಿ ಭಾಗವಹಿಸುವವರ ಪೈಕಿ ಯಶಸ್ವಿಯಾದವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಷರತ್ತು ಮತ್ತು ನಿಂಬಂಧನೆಗಳನ್ನು ಹಾಗೂ ಕೇಂದ್ರ/ರಾಜ್ಯ ಸರ್ಕಾರಗಳು ವಿಧಿಸುವ ತೆರಿಗೆಗಳು ಮತ್ತು ಷರತ್ತುಗಳಿಗೆ ಬದ್ದರಾಗಿರಬೇಕು. ಸಲ್ಲಿಸಿರುವ ಅರ್ಜಿಗಳು ಕ್ರಮಬದ್ಧವಾಗಿಲ್ಲದ ಪಕ್ಷದಲ್ಲಿ ತಿರಸ್ಕರಿಸಲಾಗುವುದು. ಯಾವುದೇ ಕಾರಣ ನೀಡದೆ ಇ–ಟೆಂಡರ್‌ನ್ನು ಪುರಸ್ಕರಿಸುವ / ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990029 & 7760990261 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾರ.ಸಾ.ನಿಗಮ ,ಬೆಂಗಳೂರು ಕೇಂದ್ರೀಯ,
ವಿಭಾಗ. ಶಾಂತಿನಗರ,
ಬೆಂಗಳೂರು

.